ವಿಜಯ ಕರ್ನಾಟಕ

# ಕ್ರೀಡಾ ಸಾಧಕರಿಗೆ ಬಹುಮಾನ

**ವಿಕ ಸುದ್ದಿಲೋಕ** ಬೆಂಗಳೂರು




ಅಂತರ ವಿಶ್ವವಿದ್ಯಾಲಯ ಹಾಗೂ ವಿವಿಧ ರಾಷ್ಟ್ರೀಯ ಕೂಟಗಳಲ್ಲಿ ಪಾಲ್ಗೊಂಡು ಪದಕ ಗೆದ್ದು ಸಾಧನೆ ಮಾಡಿದ ಕ್ರೀಡಾ ಪಟುಗಳಿಗೆ ಬೆಂಗಳೂರಿನ ಜೈನ್ ವಿದ್ಯಾ ಸಂಸ್ಥೆ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಿತು.

ಜೈನ್ ಕಾಲೇಜು ಆವರಣದಲ್ಲಿ ನಡೆದ ಸಮಾರಂಭದಲ್ಲಿ ಜೈನ್ ಸಮೂಹ ಸಂಸ್ಥೆಯ ಅಧ್ಯಕ್ಷರಾದ ಚೆನ್‌ರಾಜ್ ರಾಯ್‌ಚಂದ್ ಅವರು, 2014-15ರ ಸಾಲಿನ ಅಂತರ ವಿಶ್ವವಿದ್ಯಾಲಯ ಈಜು ಚಾಂಪಿಯನ್‌ಷಿಪ್‌ನಲ್ಲಿ 5 ಚಿನ್ನದ ಪದಕ ಗೆದ್ದು ಅಮೋಘ ಸಾಧನೆ ಮಾಡಿದ ಪೂರ್ವಾ ಕಿರಣ್ ಶೆಟ್ಟಿಗೆ 1.60 ಲಕ್ಷ ರೂ. ನಗದು ಬಹುಮಾನ ನೀಡಿ ಪ್ರೋತ್ಸಾಹಿಸಿದರು. ಇದೇ ವೇಳೆ ಅಂತರ ವಿಶ್ವವಿದ್ಯಾಲಯ ಈಜಿನಲ್ಲಿ ಹಲವು ಕೂಟ ದಾಖಲೆ ಬರೆದು ಕೀರ್ತಿ ತಂದ ಈಜುಪಟು ಮೀನಾಕ್ಷಿ ವಿಕೆಆರ್‌ಗೆ 80 ಸಾವಿರ ರೂ. ಹಾಗೂ ಪುರುಷರ ವಿಭಾಗದ ಈಜಿನಲ್ಲಿ ಆಲ್ ಇಂಡಿಯಾ ಚಾಂಪಿಯನ್ ಆಗಿ ಹೊರ ಹೊಮ್ಮಿದ ರಕ್ಷಿತ್ ಶೆಟ್ಟಿ ಅವರಿಗೆ 37 ಸಾವಿರ ರೂ. ನಗದು ಬಹುಮಾನ ನೀಡಲಾಯಿತು.

ಉಳಿದಂತೆ ಯಾಚಿಂಗ್, ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಕ್ರಿಕೆಟ್, ಟೇಕ್ವಾಂಡೊ ಹಾಗೂ ಫೆನ್ಸಿಂಗ್‌ನಂತಹ ಮೊದಲಾ ಕ್ರೀಡೆಗಳಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಿ ಪದಕ ಗೆದ್ದು ಸಾಧನೆ ಮಾಡಿದ ಜೈನ್ ಕಾಲೇಜಿನ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನ ನೀಡಿ ಗೌರವಿಸಲಾಯಿತು.